# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 217 (343) |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 06.12.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಭೂ ಮರು ಸರ್ವೆ ಮಾಡಲು ಉದ್ದೇಶಿಸಿದೆಯೇ; ಪ್ರಾಥಮಿಕವಾಗಿ ಎಷ್ಟು ತಾಲ್ಲೂಕುಗಳಲ್ಲಿ ಭೂ ಮರು ಸರ್ವೆ ಮಾಡಲಾಗುವುದು: (ವಿವರ ನೀಡುವುದು) | ಹೌದು.<br>ಪ್ರಥಮ ಹಂತದಲ್ಲಿ ರಾಜ್ಯದ ಆಯ್ದ 5 ಜಿಲ್ಲೆಗಳಾದ ರಾಮನಗರ, ಹಾಸನ, ತುಮಕೂರು, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿ ಮರು ಸರ್ವೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಮರು ಭೂ ಸರ್ವೆ ಮಾಡುವುದರಿಂದ ರೈತರಿಗೆ ಆಗುವ ಅನುಕೂಲಗಳೇನು; | ಮರು ಭೂ ಸರ್ವೆ ಕಾರ್ಯದಿಂದ ರೈತರಿಗೆ ಆಗುವ ಅನುಕೂಲಗಳು:<br>1. ರೈತರಿಗೆ ಅಳತೆಗಳನ್ನು ಹೊಂದಿರುವ ನಕ್ಷೆಯೊಂದಿಗೆ ಅವರ ಹಕ್ಕುದಾಖಲೆ(ಪಹಣಿ) ಲಭ್ಯವಾಗುತ್ತದೆ.<br>2. ರೈತರಿಗೆ ಡಿಜಿಟಲ್ ಮಾಧ್ಯಮದಲ್ಲಿ ಹಕ್ಕು ದಾಖಲೆಗಳು ಲಭ್ಯವಾಗುತ್ತದೆ.<br>3. ಇದರಿಂದ ಸೃಜಿಸಲಾದ ದಾಖಲೆಗಳು ನಿಖರವಾದ ವಸ್ತುನಿಷ್ಠ ಹಾಗೂ ದೋಷಮುಕ್ತ ಡಿಜಿಟಲ್ ಮಾಧ್ಯಮದಲ್ಲಿ ಸಿದ್ಧಪಡಿಸಿದ ಜಿಯೋ ರೆಫರೆನ್ಸ್‌ಡ್ ನಕ್ಷೆಗಳಾಗಿರುತ್ತವೆ.<br>4. ಭೂ ವ್ಯಾಜ್ಯಗಳು ಕಡಿಮೆಯಾಗುತ್ತವೆ.<br>5. ವಿವಿಧ ಇಲಾಖೆಗಳ ಮಾಹಿತಿ ಕೋಶಗಳ ಸಂಯೋಜನೆಯಿಂದ ರೈತರಿಗೆ ವಿವಿಧ ಸೇವೆ ಕೋರಿ ಅನಗತ್ಯ ಅಲೆದಾಟ ತಪ್ಪಿಸಿದಂತಾಗುತ್ತದೆ. |
| ಇ) | ಮರು ಭೂ ಸರ್ವೆ ವೈಜ್ಞಾನಿಕವಾಗಿ ಮತ್ತು ಕರಾರುವಕ್ಕಾಗಿ ಕೈಗೊಳ್ಳಲು ಸರ್ಕಾರ ಯಾವ ವಿಧಾನದ ಮೂಲಕ ಸರ್ವೆ ಮಾಡಲಿದೆ. | ಸರ್ಕಾರವು ಮರು ಭೂ ಸರ್ವೆ ಕಾರ್ಯವನ್ನು ವೈಜ್ಞಾನಿಕವಾಗಿ ಮತ್ತು ಹೆಚ್ಚು ಕರಾರುವಕ್ಕಾಗಿ ಕೈಗೊಳ್ಳುವ ಹಿತದೃಷ್ಟಿಯಿಂದ ಅಧುನಿಕ ತಂತ್ರಜ್ಞಾನವಾದ ಡ್ರೋಣ್/ Unmanned Aerial Vehicle (UAV) & Aerial ವಿಧಾನದಿಂದ ಸರ್ವೆ ಕಾರ್ಯ ಕೈಗೊಳ್ಳಲಾಗುತ್ತಿದೆ. |
| ಈ) | ರಾಜ್ಯದ ಎಲ್ಲಾ ಗ್ರಾಮಗಳನ್ನು ಯಾವ ಕಾಲಮಿತಿಯೊಳಗೆ ಮರು ಭೂ ಸರ್ವೆ ಮಾಡಲಾಗುವುದು; ಸದರಿ ಮರು ಭೂ ಸರ್ವೆಗಾಗಿ ತಗಲುವ ಅಂದಾಜು ವೆಚ್ಚ ಎಷ್ಟು? | • ಪ್ರಥಮ ಹಂತದಲ್ಲಿ 2023-24 ನೇ ಸಾಲಿನಲ್ಲಿ 5 ಜಿಲ್ಲೆಗಳು (8855 ಗ್ರಾಮಗಳು)<br>• ದ್ವಿತೀಯ ಹಂತದಲ್ಲಿ 2024-25 ನೇ ಸಾಲಿನಲ್ಲಿ 16 ಜಿಲ್ಲೆಗಳು (12855 ಗ್ರಾಮಗಳು)<br>• ತೃತೀಯ ಹಂತದಲ್ಲಿ 2025-26 ನೇ ಸಾಲಿನಲ್ಲಿ 10 ಜಿಲ್ಲೆಗಳು (9005 ಗ್ರಾಮಗಳು) |

| | | |
|---|---|---|
| | | ಮೇಲ್ಕಂಡಂತೆ ಮೂರು ಹಂತಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.<br><br>ಸದರಿ ಮರು ಭೂ ಸರ್ವೆಗಾಗಿ ಒಟ್ಟು ರೂ 363 ಕೋಟಿ ಮೊತ್ತ ತಗಲುವುದಾಗಿ ಅಂದಾಜಿಸಲಾಗಿದೆ. |

**ಸಂಖ್ಯೆ: ಕಂಇ 187 ಎಸ್‌ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

**ರಾಜ್ಯದಲ್ಲಿ ಪ್ರಾಥಮಿಕವಾಗಿ ಭೂ ಮರು ಸರ್ವೆಯನ್ನು ಡ್ರೋಣ್ ಮೂಲಕ ಕೈಗೊಳ್ಳಲು ಉದ್ದೇಶಿಸಲಾದ ಜಿಲ್ಲೆಗಳು ಮತ್ತು ತಾಲ್ಲೂಕುಗಳ ವಿವರಗಳು (ಅನುಬಂಧ-1)**

| ಜಿಲ್ಲೆ | ಕ್ರ.ಸಂ | ತಾಲ್ಲೂಕಿನ ಹೆಸರು |
|---|---|---|
| ರಾಮನಗರ | 1 | ಚನ್ನಪಟ್ಟಣ |
| | 2 | ಕನಕಪುರ |
| | 3 | ಮಾಗಡಿ |
| | 4 | ರಾಮನಗರ |
| ತುಮಕೂರು | 5 | ಚಿಕ್ಕನಾಯಕನಹಳ್ಳಿ |
| | 6 | ಗುಬ್ಬಿ |
| | 7 | ಕೊರಟಗೆರೆ |
| | 8 | ಕುಣಿಗಲ್ |
| | 9 | ಮಧುಗಿರಿ |
| | 10 | ಪಾವಗಡ |
| | 11 | ಶಿರಾ |
| | 12 | ತಿಪಟೂರು |
| | 13 | ತುಮಕೂರು |
| | 14 | ತುರುವೆಕೆರೆ |
| ಹಾಸನ | 15 | ಆಲೂರು |
| | 16 | ಅರಲಕಗೂಡು |
| | 17 | ಅರಸಿಕೆರೆ |
| | 18 | ಬೇಲೂರು |
| | 19 | ಚನ್ನರಾಯಪಟ್ಟಣ |
| | 20 | ಹಾಸನ |
| | 21 | ಹೊಳೆನರಸಿಪುರ |
| | 22 | ಸಕಲೇಶಪುರ |
| ಉತ್ತರಕನ್ನಡ | 23 | ಅಂಕೋಲ |
| | 24 | ಭಟ್ಕಳ |
| | 25 | ದಾಂಡೇಲಿ |
| | 26 | ಹಳಿಯಾಳ |
| | 27 | ಹೊನ್ನಾವರ |
| | 28 | ಕಾರವಾರ |
| | 29 | ಕುಮಟಾ |
| | 30 | ಮುಂಡಗೊಡ |
| | 31 | ಸಿದ್ದಾಪುರ |
| | 32 | ಶಿರ್ಸಿ |
| | 33 | ಸೂಪಾ |
| | 34 | ಯಲ್ಲಾಪುರ |
| ಬೆಳಗಾವಿ | 35 | ಅಥನಿ |
| | 36 | ಬೈಲಹೊಂಗಲ |
| | 37 | ಬೆಳಗಾವಿ |
| | 38 | ಚಿಕ್ಕೊಡಿ |
| | 39 | ಗೋಕಾಕ |
| | 40 | ಹುಕ್ಕೇರಿ |
| | 41 | ಕಾಗವಾಡ |
| | 42 | ಖಾನಾಪುರ |
| | 43 | ಕಿತ್ತೂರ |
| | 44 | ಮೂಡಲಗಿ |
| | 45 | ನಿಪ್ಪಾಣಿ |
| | 46 | ರಾಯಭಾಗ |
| | 47 | ರಾಮದುರ್ಗ |
| | 48 | ಸವದತ್ತಿ |
| **5 ಜಿಲ್ಲೆಗಳು** | | **48 ತಾಲ್ಲೂಕುಗಳು** |